ತೆರೆದ-ಅಂಚೆ

# ವಿದ್ಯಾ ರಂಜಕ

ಇದು ಲೇಖನಿಯ ಪ್ರೀತಿ ಮತ್ತು ಜ್ಞಾನದ ಭಂಡಾರ....

ನಿಮ್ಮ ಪ್ರೀತಿಯ ಪತ್ರಿಕೆ ಇದೀಗ ಡಿಜಿಟಲ್ ಮೀಡಿಯಾದಲ್ಲೂ ಲಭ್ಯ
www.vidyaranjaka.com

## ಕನ್ನಡ ವಾರಪತ್ರಿಕೆ

Contact :
+91 98869 61203
+91 97381 20136
www.vidyaranjaka.com
email : vidyaranjaka@gmail.com

ಈ.ಎಸ್.ವೆಂಕಟೇಶ ಬಾಬು
ಸಂಪಾದಕರು

ಈ.ವಿ.ವಿನಯ್ ಬಾಬು
ಸಹ-ಸಂಪಾದಕರು

RNI : KARKAN/2012/48547, Dt : 12.03.2013    Posted at RMS, Tumkur : Reg. No. TMR/L2/RNP-1240/2025-26

ಸಂಪುಟ : 15   ಸಂಚಿಕೆ : 11   21 ಆಗಸ್ಟ್ 2026, ಶುಕ್ರವಾರ   ಪುಟ : 08   ತುಮಕೂರು. ಬೆಲೆ : ರೂ. 4.00



## ಮಕ್ಕಳ ಹಕ್ಕುಗಳ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಿ : ಸಂತೋಷ್ ಕುಮಾರ್

## ಬಸ್ ಅಡ್ಡಗಟ್ಟಿ ಎಬಿವಿಪಿ ನೇತೃತ್ವದಲ್ಲಿ ವಿದ್ಯಾರ್ಥಿಗಳಿಂದ ಪ್ರತಿಭಟನೆ





## ವಿಕಲಚೇತನ ವ್ಯಾಪಾರಿಗಳ ಸ್ಥಳಾಂತರ ಬೇಡ: ಪಾಲಿಕೆಗೆ ಮನವಿ

## ರೋಟರಿ ಸೇವೆಯಲ್ಲಿ "ಸಮಾಜಮುಖಿ ಕಾರ್ಯಗಳಲ್ಲಿ ಅತ್ಯುತ್ತಮವಾದ ಸೇವೆ": ಬಿಳಿಗೆರೆ ಶಿವಕುಮಾರ್



ತುಮಕೂರು: ಯಾವುದೇ ಪ್ರತಿಯೊಬ್ಬರೂ ಪ್ರತಿಫಲದ ನಿರೀಕ್ಷೆಯಿಲ್ಲದೆ ಮಾಡುವ ಸೇವೆಯೇ ಶ್ರೇಷ್ಠವಾದ ಸೇವೆಯಾಗಿದೆ. ರೋಟರಿ ಸಂಸ್ಥೆಯಾಗಿದೆ. ಯುವ ತಂಡವಾಗಿ ಜಿಲ್ಲೆಯಾದ್ಯಂತ ಉತ್ತಮ ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿದ್ದು, ಈ ಸೇವಾ ಪರಂಪರೆಯನ್ನು ಮತ್ತಷ್ಟು ಬಲಪಡಿಸಬೇಕು ಎಂದು ಉತ್ತಮ ಸಲಹೆ ನೀಡಬೇಕು ಎಂದು ಜಿಲ್ಲಾ ರೋಟರಿ ಸಲಹೆಗಾರರಾದ ಬಿಳಿಗೆರೆ ಶಿವಕುಮಾರ್‌ರವರು ತಿಳಿಸಿದರು.

ನಗರದ ಬಾಪೂಜಿ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ರೋಟರಿ ಶಿರಾಗೇಟ್ ಮತ್ತು ಯಲ್ಲಾಪುರ ವಿಭಾಗದ ನೂತನ 2026–27 ನೇ ಸಾಲಿನ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಮಂಡಳಿಯ ಪದಗ್ರಹಣ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಬಿಳಿಗೆರೆ ಶಿವಕುಮಾರ್‌ರವರು ಉದ್ಘಾಟಿಸಿ ಮಾತನಾಡುತ್ತಾ ರೋಟರಿ ಸಂಸ್ಥೆಯ ಪ್ರಾಮುಖ್ಯತೆ ನಡೆದು ಬಂದ ದಾರಿಯನ್ನು ವಿವರಿಸುತ್ತಾ, ಈ ವರ್ಷ ಪರಿಸರ ಕ್ಷೇತ್ರಕ್ಕೆ ಅತಿ ಹೆಚ್ಚು ಒತ್ತು ನೀಡಿ ಸಮಾಜದಲ್ಲಿ ಗಿಡ ನೆಡುತ್ತಾ ಹೇಗೆ ಪರಿಸರ ಪ್ರಜ್ಞೆಯನ್ನು ಮೂಡಿಸಬೇಕು ಎಂದರು. ಸಾವಿರಾರು ರೋಗಿಗಳಿಗೆ ನೆರವಾಗಿರುವುದು ತಮ್ಮ ಬದುಕಿನ ಅತ್ಯಂತ ತೃಪ್ತಿಕರ ಸೇವೆಯಾಗಿದೆ. ಶಿಕ್ಷಣ, ಆರೋಗ್ಯ, ಮಹಿಳಾ ಸಬಲೀಕರಣ, ಪರಿಸರ ಸಂರಕ್ಷಣೆ ಉದ್ಯೋಗ ಕೌಶಲ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ರೋಟರಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿದ್ದು, ಯುವ ಜನರು ಹೆಚ್ಚಿನ ಸಂಖ್ಯೆಯಲ್ಲಿ ರೋಟರಿಯೊಂದಿಗೆ ಕೈಜೋಡಿಸುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಿರಾಗೇಟ್ ಮತ್ತು ಯಲ್ಲಾಪುರ ರೋಟರಿ ಸಂಸ್ಥೆಯ ಅಧ್ಯಕ್ಷರಾಗಿ ಅಧಿಕಾರಿ ಸ್ವೀಕರಿಸಿದ ಎಂ.ಎನ್.ಚಂದ್ರಶೇಖರ್‌ರವರು ಮಾತನಾಡುತ್ತಾ ಸೇವೆಯ ಪ್ರಮಾಣಕ್ಕಿಂತ ಅದು ತಲುಪುವ ವ್ಯಕ್ತಿ ಹಾಗೂ ಸಮಾಜದ ಮೇಲೆ ಬೀರುವ ಪರಿಣಾಮವೇ ಮುಖ್ಯವಾಗಿದೆ. ನಿಸ್ವಾರ್ಥ ಸೇವೆಯಿಂದ ಜೀವನಕ್ಕೆ ಸಾರ್ಥಕತೆ ಸಿಗುತ್ತದೆ. ಸರಕಾರಿ ಶಾಲೆಗಳ ಅಭಿವೃದ್ಧಿ, ಪರಿಸರ ಸಂರಕ್ಷಣೆ, ಬಡ ಮಕ್ಕಳ ಶಿಕ್ಷಣಕ್ಕೆ ನೆರವು ಹಾಗೂ ಸಮಾಜಮುಖಿ ಕಾರ್ಯಕ್ರಮಗಳಿಗೆ ಆದ್ಯತೆ ನೀಡುವುದಾಗಿ ಹೇಳಿದರು. ಪ್ರತಿಯೊಬ್ಬ ಸದಸ್ಯರ ಅಭಿಪ್ರಾಯಕ್ಕೆ ಗೌರವ ನೀಡಿ, ಎಲ್ಲರನ್ನು ಜೊತೆಯಾಗಿ ಕೊಂಡೊಯ್ಯುವ ಮೂಲಕ ಸೇವಾ ಚಟುವಟಿಕೆಗಳನ್ನು ಮತ್ತಷ್ಟು ವಿಸ್ತರಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ರೋಟರಿ ಕಾರ್ಯದರ್ಶಿಗಳಾದ ಸಿ.ಎನ್. ಪ್ರಸನ್ನಕುಮಾರ್‌ರವರು ಮಾತನಾಡುತ್ತಾ ಮಕ್ಕಳ ಪ್ರತಿಭೆ ಹಾಗೂ ಸಾಮರ್ಥ್ಯವನ್ನು ಗುರುತಿಸಿ, ಅವರಲ್ಲಿ ಆತ್ಮವಿಶ್ವಾಸ, ನಾಯಕತ್ವ ಗುಣ, ಕೌಶಲ್ಯ ಮತ್ತು ಸಾಮಾಜಿಕ ಜವಾಬ್ದಾರಿ ಬೆಳೆಸುವಂತಹ ತರಬೇತಿ ಕಾರ್ಯಕ್ರಮಗಳು ಹಾಗೂ ಸಮಾಜಮುಖಿ ಚಟುವಟಿಕೆಗಳನ್ನು ಗುರುತಿಸುವ ಕೆಲಸ ರೋಟರಿ ಸಂಸ್ಥೆಯಾಗಿದೆ ಎಂದು ಅರ್ಥಪೂರ್ಣವಾಗಿ ವಿವರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ರೋಟರಿ ಮಹಿಳಾ ಅಡ್ವೈಸರ್ ಶ್ರೀಮತಿ ಪ್ರಮೀಳಾ ಶಿವಕುಮಾರ್‌ರವರು ಮಾತನಾಡುತ್ತಾ ಮಹಿಳೆಯರು ಹೆಚ್ಚು-ಹೆಚ್ಚು ರೋಟರಿ ಸಂಸ್ಥೆಗಳಲ್ಲಿ ತೊಡಗಿಸಿಕೊಳ್ಳಬೇಕು. ಮಹಿಳೆಯರು ಕೇವಲ ಅಡಿಗೆ ಮನೆಗೆ ಮಾತ್ರ ಸೀಮಿತವಾಗದೇ ಮಹಿಳೆಯರ ಕುಂದು ಕೊರತೆಗಳನ್ನು ಪರಿಹರಿಸಲು ರೋಟರಿ ಸಂಸ್ಥೆಗಳ ಜೊತೆ ತಮ್ಮ ಕೈ ಜೋಡಿಸಬೇಕೆಂದರು. ಇದಕ್ಕೆ ನಮ್ಮೆಲ್ಲ ಏಳಿಗ್ಗೆಗೆ ಪುರುಷರ ಪ್ರೋತ್ಸಾಹ ಅಗತ್ಯವಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಘವೇಂದ್ರ ಕೆಇಬಿ, ರೋಟರಿಯ ಪದಾದಿಕಾರಿಗಳಾದ ರೊ.ಶ್ರೀದೇವಿ, ರೊ.ಅನ್ನಪೂರ್ಣ, ರೊ.ಲಕ್ಷ್ಮೀ, ರೊ.ರತ್ನಮ್ಮ, ರೊ.ಹನುಮಂತರಾಯಪ್ಪ, ರೋಟರಿಯ ಗೌರವಾಧ್ಯಕ್ಷರಾದ ರೊ.ಸುದರ್ಶನ್, ರೊ.ಲಕ್ಷ್ಮೀನರಸಿಂಹಯ್ಯ, ಕುಪ್ಪೂರು ರೊ.ಶ್ರೀಧರ್ ಮತ್ತು ರೋಟರಿಯ ಎಲ್ಲಾ ಸದಸ್ಯರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಮಕ್ಕಳ ಹಕ್ಕುಗಳ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಿ : ಸಂತೋಷ್ ಕುಮಾರ್



ತುಮಕೂರು : ಮಕ್ಕಳಿಗೆ ಗುಣಮಟ್ಟದ ಆರೋಗ್ಯ, ಶಿಕ್ಷಣ ಹಾಗೂ ಸುರಕ್ಷಿತ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಹೆಚ್ಚಿನ ಆದ್ಯತೆ ನೀಡಿ ಕಾರ್ಯನಿರ್ವಹಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಸಂತೋಷ್ ಕುಮಾರ್ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಕ್ಕಳ ಹಕ್ಕುಗಳ ಕುರಿತು ಜರುಗಿದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ವಸತಿ ನಿಲಯಗಳ ಶೌಚಾಲಯ ಸ್ವಚ್ಛತೆ ಹಾಗೂ ಮೂಲಭೂತ ಸೌಲಭ್ಯಗಳ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದರಲ್ಲದೆ, ಮಕ್ಕಳ ಪಾಲನಾ ಸಂಸ್ಥೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನಿಯಮಾನುಸಾರ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ವಸತಿ ನಿಲಯಗಳಲ್ಲಿ ಅಡುಗೆ ಮಾಡಿದ ನಂತರ ಆಹಾರದ ಮಾದರಿಯನ್ನು 24 ಗಂಟೆಗಳ ಕಾಲ ಸಂಗ್ರಹಿಸಿಡಬೇಕು. ಅವಧಿ ಮೀರಿದ ಆಹಾರ ಪದಾರ್ಥಗಳನ್ನು ಯಾವುದೇ ಕಾರಣಕ್ಕೂ ಮಕ್ಕಳ ಸೇವನೆಗೆ ಬಳಸಬಾರದು. ಆಹಾರ ಕೊಠಡಿಯಲ್ಲಿ ಸಂಗ್ರಹಿಸಿರುವ ಪದಾರ್ಥಗಳ ಎಕ್ಸ್‌ಪೈರಿ ದಿನಾಂಕವನ್ನು ನಿಯಮಿತವಾಗಿ ಪರಿಶೀಲಿಸಬೇಕು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸುವ ನಿಟ್ಟಿನಲ್ಲಿ ವಸತಿ ನಿಲಯ ಹಾಗೂ ಶಾಲೆಗಳಲ್ಲಿರುವ ಗ್ರಂಥಾಲಯದ ಪುಸ್ತಕಗಳನ್ನು ಮಕ್ಕಳು ನಿಯಮಿತವಾಗಿ ತೆಗೆದುಕೊಂಡು ಓದುವಂತೆ ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು.

ಮಕ್ಕಳ ಆರೋಗ್ಯ, ಶಿಕ್ಷಣ, ಪೌಷ್ಟಿಕ ಆಹಾರ, ಸ್ವಚ್ಛತೆ ಹಾಗೂ ಸುರಕ್ಷತೆಗೆ ಸಂಬಂಧಿಸಿದ ಯಾವುದೇ ಸಮಸ್ಯೆಗಳು ಕಂಡು ಬಂದಲ್ಲಿ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯಕ್ಕೆ ಅವಕಾಶ ನೀಡಬಾರದು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಇದಕ್ಕೂ ಮುನ್ನ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಸಂತೋಷ್ ಕುಮಾರ್ ಹಾಗೂ ಸದಸ್ಯ ಸತ್ಯನಾರಾಯಣ ಶೆಟ್ಟಿ ಅವರು ಮಂಗಳವಾರ ತುಮಕೂರು ಜಿಲ್ಲೆಗೆ ಭೇಟಿ ನೀಡಿ ವಿವಿಧ ಶಾಲೆ, ಅಂಗನವಾಡಿ ಕೇಂದ್ರ, ವಸತಿ ನಿಲಯ, ಪೊಲೀಸ್ ಠಾಣೆ, ಆಸ್ಪತ್ರೆ ಹಾಗೂ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಪ್ರತ್ಯೇಕವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಂತೋಷ್ ಕುಮಾರ್ ಅವರು ನಗರದ ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ ಶ್ರೀ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸಿದ ಸಂದರ್ಭದಲ್ಲಿ ವಸತಿ ನಿಲಯಗಳಲ್ಲಿ ಮಕ್ಕಳಿಗೆ ತರಕಾರಿ, ಸೊಪ್ಪು, ಕಾಳು ಸೇರಿದಂತೆ ಪೌಷ್ಟಿಕ ಆಹಾರವನ್ನೇ ನೀಡಬೇಕು. ನಿಲಯದ ಅಡುಗೆ ಕೋಣೆಯನ್ನು ಪರಿಶೀಲಿಸಿ ಆಹಾರ ತಯಾರಿಕೆಯ ವೇಳೆ ಸ್ವಚ್ಛತೆ ಮತ್ತು ಗುಣಮಟ್ಟವನ್ನು ಕಾಪಾಡಬೇಕು. ಮಕ್ಕಳಿಗೆ ನಿಯಮಿತವಾಗಿ ವೈದ್ಯಕೀಯ ತಪಾಸಣೆ ನಡೆಸಬೇಕು. ಮಕ್ಕಳ ಆರೋಗ್ಯದ ಬಗ್ಗೆ ಅಧಿಕಾರಿಗಳು ಹೆಚ್ಚಿನ ಕಾಳಜಿ ವಹಿಸಬೇಕು ಅಧಿಕಾರಿ/ಸಿಬ್ಬಂದಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪವಿತ್ರ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ|| ಅಸ್ಗರ್ ಬೇಗ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಡಾ: ಸಿದ್ದರಾಮಣ್ಣ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಸೋನಿಯಾ ವೆರ್ಣೇಕರ್ ಸೇರಿದಂತೆ ಮತ್ತಿತರೆ ಅಧಿಕಾರಿಗಳು ಭಾಗವಹಿಸಿದ್ದರು.

**ಪ್ರಕೃತಿಯನ್ನು ನಾವು ಕಾಪಾಡಿದರೆ; ಅದೇ ನಮ್ಮನ್ನು ರಕ್ಷಿಸುತ್ತದೆ......**

# ತುಮಕೂರಿನಲ್ಲಿ ಫುಟ್‌ಪಾತ್ ಒತ್ತುವರಿ ತೆರವು: ಸಣ್ಣ ವ್ಯಾಪಾರಿಗಳ ಅಳಲು, ಸಾರ್ವಜನಿಕರಿಂದ ಮಿಶ್ರ ಪ್ರತಿಕ್ರಿಯೆ




ತುಮಕೂರು: ತುಮಕೂರು ನಗರದ ಪ್ರಮುಖ ರಸ್ತೆಗಳಲ್ಲಿ ಕಳೆದ ಮೂರು?ನಾಲ್ಕು ದಿನಗಳಿಂದ ಮಹಾನಗರ ಪಾಲಿಕೆ ವತಿಯಿಂದ ಫುಟ್‌ಪಾತ್ ಒತ್ತುವರಿ ತೆರವು ಕಾರ್ಯಾಚರಣೆ ಭರದಿಂದ ಸಾಗುತ್ತಿದ್ದು, ಜೆಸಿಬಿಗಳ ಘರ್ಜನೆಗೆ ಸಣ್ಣ ಹಾಗೂ ಅತಿಸಣ್ಣ ವ್ಯಾಪಾರಿಗಳು ಆತಂಕಕ್ಕೊಳಗಾಗಿದ್ದಾರೆ.

ಯಾವುದೇ ಮುನ್ಸೂಚನೆ, ನೋಟಿಸ್ ಅಥವಾ ಸೂಕ್ತ ಮಾಹಿತಿ ನೀಡದೆ, ಹಲವು ದಶಕಗಳಿಂದ ಫುಟ್‌ಪಾತ್‌ಗಳಲ್ಲಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಸಣ್ಣ ವ್ಯಾಪಾರಿಗಳನ್ನು ಏಕಾಏಕಿ ತೆರವುಗೊಳಿಸಲಾಗಿದೆ ಎಂದು ಕೆಲ ವ್ಯಾಪಾರಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸರ್ಕಾರದ ಯೋಜನೆಯಡಿ ನೋಂದಾಯಿಸಿಕೊಂಡಿರುವ ಕೆಲವು ಬೀದಿ ಬದಿ ವ್ಯಾಪಾರಿಗಳಿಗೆ ವೆಂಡರ್ ಝೋನ್‌ಗಳನ್ನು ಗುರುತಿಸಲಾಗಿದೆ. ಆದರೆ ಮಾಹಿತಿ ಕೊರತೆಯಿಂದ ನೋಂದಾಯಿಸಿಕೊಳ್ಳದ ಬಡ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿಲ್ಲ ಎಂಬ ಆರೋಪ ಕೇಳಿಬಂದಿದೆ. "ನಮಗೆ ಪಾಲಿಕೆ ಅಥವಾ ಸರ್ಕಾರ ಕೆಲಸ ನೀಡಿದರೆ ಜೀವನ ನಡೆಸುತ್ತೇವೆ. ಇಲ್ಲವಾದರೆ ನಮ್ಮ ಬದುಕು ದುಸ್ತರವಾಗುತ್ತದೆ" ಎಂದು ವ್ಯಾಪಾರಿಗಳು ಅಳಲು ತೋಡಿಕೊಂಡಿದ್ದಾರೆ.

ಅಂಗಡಿ ಬಾಡಿಗೆಗೆ ಪಡೆಯಲು ದೊಡ್ಡ ಮೊತ್ತದ ಅಡ್ವಾನ್ಸ್ ಹಾಗೂ ಮಾಸಿಕ ಬಾಡಿಗೆ ಪಾವತಿಸುವಷ್ಟು ಸಾಮರ್ಥ್ಯ ನಮಗಿಲ್ಲ. ಪ್ರತಿದಿನ ದುಡಿದ ಹಣದಿಂದಲೇ ಅಂದಿನ ಜೀವನ ಸಾಗಿಸುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ಬಾಡಿಗೆ ಅಂಗಡಿ ಪಡೆದು ವ್ಯಾಪಾರ ಮಾಡುವುದು ಕಷ್ಟವಾಗಿದೆ ಎಂದು ವ್ಯಾಪಾರಿಗಳು ಹೇಳಿದ್ದಾರೆ.

ಇನ್ನೊಂದೆಡೆ, ಫುಟ್‌ಪಾತ್‌ಗಳ ಒತ್ತುವರಿ ತೆರವುಗೊಳಿಸಿರುವುದರಿಂದ ನಗರದ ಸೌಂದರ್ಯ ಹೆಚ್ಚಾಗಿದೆ ಎಂದು ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದೇ ಸ್ವಚ್ಛತೆ ಮುಂದುವರಿಯಬೇಕು. ಜೊತೆಗೆ ರಸ್ತೆಗಳಲ್ಲಿ ಸೂಕ್ತ ಪಾರ್ಕಿಂಗ್ ಸ್ಥಳಗಳನ್ನು ಗುರುತಿಸಿದರೆ ಸಂಚಾರ ಸುಗಮವಾಗಲಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.

ವಿಶೇಷವಾಗಿ ಆಟೋ ಹಾಗೂ ಗೂಡ್ಸ್ ವಾಹನಗಳು ಎಲ್ಲೆಂದರಲ್ಲಿ ನಿಲ್ಲಿಸುವುದರಿಂದ ಸಾರ್ವಜನಿಕರು ಹಾಗೂ ವ್ಯಾಪಾರಿಗಳಿಗೆ ತೊಂದರೆಯಾಗುತ್ತಿದ್ದು, ಈ ಕುರಿತು ಪಾಲಿಕೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಅದೇ ವೇಳೆ, ಫುಟ್‌ಪಾತ್ ವ್ಯಾಪಾರಿಗಳಿಗೆ ಸೂಕ್ತ ವೆಂಡರ್ ಝೋನ್‌ಗಳನ್ನು ಹಾಗೂ ಪರ್ಯಾಯ ಸ್ಥಳಗಳನ್ನು ಗುರುತಿಸುವ ಮೂಲಕ ಅವರ ಜೀವನೋಪಾಯಕ್ಕೂ ಭದ್ರತೆ ಕಲ್ಪಿಸಬೇಕು. ನಗರ ಸ್ವಚ್ಛತೆ ಹಾಗೂ ಸಣ್ಣ ವ್ಯಾಪಾರಿಗಳ ಜೀವನೋಪಾಯ ಎರಡನ್ನೂ ಗಮನದಲ್ಲಿಟ್ಟುಕೊಂಡು ಪಾಲಿಕೆ ಸಮತೋಲನದ ಕ್ರಮ ಕೈಗೊಳ್ಳಬೇಕೆಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

# ಸುಗಮ ಮತ್ತು ಸುಸ್ಥಿರ ವ್ಯವಹಾರಕ್ಕಾಗಿ ಕೃಷಿ ಸಾಲ ಗ್ರಾಹಕರ ಸಮ್ಮಿಲನ ಕಾರ್ಯಕ್ರಮ

ತುಮಕೂರು; ಎಲ್ಲರೂ ತಮ್ಮ ಹಣಕಾಸಿನ ಉತ್ತಮ ವ್ಯವಹಾರಕ್ಕಾಗಿ ನಮ್ಮ ಸೆಂಟ್ರಲ್ ಬ್ಯಾಂಕ್‌ನ ಆಪ್ ಇಂಡಿಯಾದಲಿ ವ್ಯವಹರಿಸಿ ತಮ್ಮ ವ್ಯವಹಾರಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕು ಎಂದು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರು ಪ್ರಾದೇಶಿಕ ವ್ಯವಸ್ಥಾಪಕರಾದ ಸತೀಶ್ ಬಾಬು ತಿಳಿಸಿದರು.



ನಗರದ ಎಸ್. ಎಸ್. ಪುರಂ 1ನೇ ಕ್ರಾಸ್‌ನ ಕನ್ಯಾಕಪರಮೇಶ್ವರಿ ದೇವಾಲಯ ಸಭಾಂಗಣದಲ್ಲಿ ಮತ್ತು ಕೃಷಿ ಸಮುದಾಯಕ್ಕೆ ಆಡಳಿತಾತ್ಮಕ ಸಾಲ ಹಾಗೂ ಆರ್ಥಿಕ ಪರಿಹಾರಗಳನ್ನು ಸುಲಭವಾಗಿ ದೊರಕಿಸಿಕೊಡುವುದು, ರೈತರನ್ನು ಸಬಲೀಕರಣಗೊಳಿಸುವ ಸಲುವಾಗಿ. ಕೃಷಿ ಸಾಲ ಸಂಪರ್ಕ ಪ್ರಚಾರ ಮತ್ತು ಗ್ರಾಹಕರ ಸಮ್ಮಿಲನ ಕಾರ್ಯಕ್ರಮ ಮುಖ್ಯ ಅತಿಥಿಗಳಾಗಿ ಪಿ. ಸತೀಶ್ ಬಾಬು ಮಾತನಾಡಿದರು. 1911 ರಲ್ಲಿ ಸ್ಥಾಪಿತವಾದ ಸೆಂಟ್ರಲ್ ಬ್ಯಾಂಕ್ ಇಂದು ದೇಶದಾದ್ಯಂತ 4500 ಹೆಚ್ಚು ಶಾಖೆಗಳನ್ನು ಹೊಂದಿದ್ದು ಎಮ್ ಎಸ್ ಎಂ ಇ ಗಳಿಗೆ ಪ್ರಾಮುಖ್ಯತೆ ನೀಡುವುದರೊಂದಿಗೆ ಹೈನುಗಾರಿಕೆ, ಪೌಲ್ಟ್ರಿ ಸ್ವಂಯಂ ಉದ್ಯೋಗಕ್ಕೆ ಗ್ರಾಮೀಣ ಭಾಗದಲ್ಲೂ ವಿಶೇಷ ಸಾಲ ಸೌಲಭ್ಯ ನೀಡುವುದರೊಂದಿಗೆ ದೇಶದ ಆರ್ಥಿಕತೆ ಪ್ರಾಮುಖ್ಯತೆ ನೀಡುತ್ತಿದೆ ಎಂದು ತಿಳಿಸಿದರು. ಸೆಂಟ್ರಲ್ ಬ್ಯಾಂಕ್ 100 ಹೆಚ್ಚು ಶಾಖೆಗಳೊಂದಿ ಕರ್ನಾಟಕದಲ್ಲಿ ಎರಡು ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದರು. 2025–26 ಸಾಲಿನ ಆರ್ಥಿಕ ವರ್ಷದಲ್ಲಿ ಸುಮಾರು 8.56 ಲಕ್ಷ ಕೋಟಿ ವ್ಯವಹಾರ ನಿರ್ವಹಿಸಿದ್ದು ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದರು. ಮಹಿಳೆಯರಿಗಾಗಿ ಪ್ರತ್ಯೇಕ ಯೋಜನೆಗಳನ್ನು ಬ್ಯಾಂಕ್ ರೂಪಿಸಿದ್ದು ಇದರ ಪ್ರಯೋಜನ ಪಡೆದುಕೊಳ್ಳುವಂತೆ ಮಹಿಳೆಯರಿಗೆ ಮನವಿ ಮಾಡಿದರು. ಸಾಲ ಸೌಲಭ್ಯ ಪಡೆಯಲು ಎಲ್ಲರೂ ತಮ್ಮ ಸಿಬಿಲ್ ಸ್ಕೋರ್ ನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿಕೊಳ್ಳಬೇಕು ಮತ್ತು ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಮಾಡಿ ವ್ಯವಹಾರನ್ನು ಉತ್ತಮ ರೀತಿಯಲ್ಲಿ ಕಾಪಾಡಿಕೊಳ್ಳಬೇಕು ಮತ್ತು ಪ್ರಸ್ತುತ ಡಿಜಿಟಲ್ ಅರೆಸ್ಟ್ ಎಂಬ ಮಾಹಾ ಮಾರಿಗೆ ತುತ್ತಾಗದಂತೆ ಎಚ್ಚರಿಕೆಯಿಂದು ಇರಬೇಕು. ಬ್ಯಾಂಕ್ ಖಾತೆ ಕುರಿತು ಯಾರೇ ಓಟಿಪಿ ಕೇಳಿದರು ನೀಡಬಾರದು ಮತ್ತು ಬ್ಯಾಂಕ್ ಓರತುಪಡಿಸಿ ಯಾವುದೇ ಅನಧಿಕೃತ ಲಿಂಕ್‌ಗಳನ್ನು ಕ್ಲಿಕ್ ಮಾಡಬಾರದು ಇದರಿಂದ ನಿಮ್ಮ ಹಣಕ್ಕೆ ಅಪಾಯ ಎದುರಾಗುತ್ತದೆ ಎಂದು ಬ್ಯಾಂಕ್ ಗ್ರಾಹಕರಿಗೆ ತಿಳಿಸದರು.

ಅತಿಥಿಯಾಗಿ ಭಾಗವಹಿಸಿದ್ದ ಕುಸುಮಾ ಮಾತನಾಡಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಲ್ಲಿ ಇರುವು ಪ್ರಧಾನ್ ಮಂತ್ರಿ ಸುರಕ್ಷಾ ಯೋಜನೆ, ಪ್ರಧಾನ್ ಮಂತ್ರಿ ಜೀವನ್ ಜ್ಯೋತಿ ಯೋಜನೆ, ಆಟಲ್ ಪೆನ್ಶನ್ ಯೋಜನೆ ಗಳನ್ನು ಬ್ಯಾಂಕ್ ನ ಗ್ರಾಹಕರು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಯಾವುದೇ ಬ್ಯಾಂಕ್ ಗಳ್ಲೀ ದಾಖಲೆ ರಹಿತ ಬ್ಯಾಂಕ್ ಖಾತೆ ತೆರೆಯಲು ಕಾಲ ಕಾಲಕ್ಕೆ ಬ್ಯಾಂಕ್ ನಿಂದ ಮಾಡಿಸುವ ಇ–ಕೆವೈಸಿ ಯೊಂದಿಗೆ ಸಿಕೆವೈಸಿಯನ್ನು ಮಾಡಿಸಿಕೊಳ್ಳಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕುಸುಮ ಮತ್ತು ಸಾಕಿ ಬಾಯಿ ಪ್ರಾರ್ಥಿಸಿ ನಿರೂಪಿಸಿದರು. ಸೆಂಟ್ರಲ್ ಬ್ಯಾಂಕ್ ನ ಶಶಾಂಕ್, ವ್ಯವಸ್ಥಾಪಕರಾದ ಎಂ ಎನ್ ರಂಗಸ್ವಾಮಿ, ಬಾಸ್ಕರ್ ಕಂಪೆನಿ ಭಾಸ್ಕರ್, ಬ್ಯಾಂಕ್ ಗ್ರಾಹಕರಾದ ಮಂಜುನಾಥ ಶೆಟ್ಟಿ, ಬ್ಯಾಂಕ್ ವ್ಯವಸ್ಥಾಪಕರಾದ ರೇಣುಕಸ್ವಾಮಿ, ಶರಣಪ್ಪ ಬಂಡಾರಿ ಸಿಬ್ಬಂದಿಗಳಾದ ರಮ್ಯಾ, ಅಲೆನ್ ಸೇರಿದಂತೆ ಶಾಖಾ ಸಿಬ್ಬಂಧಿಗಳು ಹಲವಾರು ಗ್ರಾಹಕರು ಭಾಗವಹಿಸಿದ್ದರು.

# ಸಚಿವ ಸಂಪುಟದಿAದ ನಾಗೇಂದ್ರ ವಜಾಗೊಳಿಸಲು ಬಿಜೆಪಿ ಆಗ್ರಹ

ತುಮಕೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರುಪಯೋಗ ಆರೋಪ ಹೊತ್ತಿರುವ ಸಚಿವ ಬಿ. ನಾಗೇಂದ್ರ ಅವರನ್ನು ಸಂಪುಟದಿಂದ ವಜಾಗೊಳಿಸಲು ಒತ್ತಾಯಿಸಿ ಜಿಲ್ಲಾ ಬಿಜೆಪಿ ಮುಖಂಡರು ಜಿಲ್ಲಾಧಿಕಾರಿಗಳ ಕಚೇರಿ ಬಳಿ ಸೋಮವಾರದಿಂದ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹೆಬ್ಬಾಕ ರವಿಶಂಕರ್ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ 94 ಕೋಟಿ ರೂ.ಗಳನ್ನು ಖಾಸಗಿಯವರಿಗೆ ವರ್ಗಾವಣೆ ಮಾಡಿರುವ ಆರೋಪ ಹೊತ್ತು ಜೈಲಿಗೆ ಹೋಗಿ ಬೇಲ್ ಮೇಲೆ ಹೊರ ಬಂದಿರುವ ಸಚಿವ ಬಿ. ನಾಗೇಂದ್ರ ಅವರನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಯಾವ ನೈತಿಕತೆಯಿಂದ ಮತ್ತೆ ಸಚಿವ ಸ್ಥಾನ ನೀಡಿದ್ದಾರೆ. ಅವರನ್ನೂ ಸಂಪುಟದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಸಚಿವರಾಗಿದ್ದ ನಾಗೇಂದ್ರ ಅವರು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಜುವೆಲ್ಲರಿಯವರಿಗೆ ಮತ್ತಿತರ ಖಾಸಗಿಯವರ ಖಾತೆಗೆ ವರ್ಗಾವಣೆ ಮಾಡಿದ ಪ್ರಕರಣದ ಆರೋಪಿಯಾಗಿದ್ದಾರೆ. ಆ ವೇಳೆ ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಡಲಾಗಿತ್ತು. ಖಾಸಗಿವರ ಖಾತೆಗೆ ವರ್ಗಾವಣೆಯಾದ ಹಣವನ್ನು ತೆಲಂಗಾಣ ಹಾಗೂ ರಾಜ್ಯದ ಲೋಕಸಭಾ ಚುನಾವಣೆಗೆ ಬಳಸಿಕೊಳ್ಳಲಾಗಿದೆ.

ಪ್ರಕರಣ ಸಂಬಂಧ ಸಿಬಿಐ ತನಿಖೆ ನಡೆಸುತ್ತಿದೆ. ಸಚಿವ ನಾಗೇಂದ್ರ ಅವರು ಪ್ರಕರಣದ ಆರೋಪಿಯಾಗಿದ್ದಾರೆ. ನಾಗೇಂದ್ರ ಅವರನ್ನು ಸಚಿವ ಸ್ಥಾನದಿಂದ ತೆಗೆಯಬೇಕು ಎಂದು ಬಿಜೆಪಿ ಸದನದ ಒಳಗೆ ಹಾಗೂ ಹೊರಗೆ ಹೋರಾಟ ಮಾಡುತ್ತಿದೆ ಎಂದು ಹೇಳಿದರು.

ಜಿಲ್ಲಾ ಬಿಜೆಪಿ ನಾಯಕ ವೈ.ಹೆಚ್.ಹುಚ್ಚಯ್ಯ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಕೋಟ್ಯಾಂತರ ರೂ. ಅವ್ಯವಹಾರದ ಪ್ರಮುಖ ಆರೋಪಿ ಎಂಬ ಆರೋಪದಲ್ಲಿ ನಾಗೇಂದ್ರ ಅವರು ಜೈಲಿಗೆ ಹೋಗಿದ್ದರು. ಅವರನ್ನು ಹಿಂದೆ ಸಚಿವ ಸ್ಥಾನದಿಂದ ಕಿತ್ತುಹಾಕಿದ್ದರು. ಆದರೂ ಕಾಂಗ್ರೆಸ್ ಹೈಕಮಾಂಡ್ ಹಾಗೂಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮತ್ತೆ ನಾಗೇಂದ್ರ ಅವರಿಗೆ ಮಂತ್ರಿ ಸ್ಥಾನ ನೀಡಿರುವುದು ಖಂಡನೀಯ ಎಂದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ, ವಾಲ್ಮೀಕಿ ಸಮಾಜ ಮುಖಂಡ ಊರುಕೆರೆ ವಿಜಯಕುಮಾರ್ ಮಾತನಾಡಿ, ವಾಲ್ಮೀಕಿ ಸಮುದಾಯದ ಜನರಿಗೆಂದು ಮೀಸಲಾದ ಹಣವನ್ನು ತೆಲಂಗಾಣ, ಕರ್ನಾಟಕ ಚುನಾವಣೆಗೆ ಬಳಸಿಕೊಂಡಿದ್ದು ಖಂಡನೀಯ. ಅವರನ್ನು ಕೂಡಲೇ ಸಚಿವ ಸ್ಥಾನದಿಂದ ವಜಾಗೊಳಿಸಬೇಕು. ವಾಲ್ಮೀಕಿ ಸಮಾಜದ ಇತರೆ ಶಾಸಕರಿಗೆ ಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.



ಜಿಲ್ಲಾ ಬಿಜೆಪಿ ಎಸ್.ಟಿ. ಮೋರ್ಚಾ ಅಧ್ಯಕ್ಷ ದಿಲೀಪ್ ಮಾತನಾಡಿ, ವಾಲ್ಮೀಕಿ ಸಮಾಜಕ್ಕೆ ಮೀಸಲಾಗಿದ್ದ ಹಣವನ್ನು ಬೇರೆ ಉದ್ದೇಶಕ್ಕೆ ಬಳಸಿ ಸಮಾಜಕ್ಕೆ ಅನ್ಯಾಯ ಮಾಡಿದ ಸಚಿವ ನಾಗೇಂದ್ರ ಅವರಿಗೆ ಮಂತ್ರಿ ಸ್ಥಾನ ನೀಡಬಾರದು, ಇದ ಬದಲು ಹಿರಿಯ ಶಾಸಕರಾದ ತುಮಕೂರಿನ ಕೆ.ಎನ್. ರಾಜಣ್ಣ, ಮೊಳಕಾಲ್ಮೂರಿನ ಎನ್.ವೈ. ಗೋಪಾಲಕೃಷ್ಣ ಅವರನ್ನು ಮಂತ್ರಿ ಮಾಡಬೇಕು ಎಂದು ಆಗ್ರಹಿಸಿದರು.

ಜಿಲ್ಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ಟಿ.ಹೆಚ್. ಹನುಮಂತ ರಾಜು, ಉಪಾಧ್ಯಕ್ಷರಾದ ನಾಗರತ್ನಮ್ಮ, ಕಾರ್ಯದರ್ಶಿ ಹೆಚ್.ಎಂ. ರವೀಶಯ್ಯ, ಕೆ. ವೇದಮೂರ್ತಿ, ಖಜಾಂಚಿ ಗಣೇಶ್ ಪ್ರಸಾದ್, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಸತ್ಯಮಂಗಲ ಜಗದೀಶ್, ನಗರ ಅಧ್ಯಕ್ಷ ಧನುಷ್, ಪ್ರಧಾನ ಕಾರ್ಯದರ್ಶಿಗಳಾದ ವಿರೂಪಾಕ್ಷಪ್ಪ, ಹನುಮಂತರಾಜು, ಮಹಿಳಾ ಮೋರ್ಚಾ ನಗರ ಅಧ್ಯಕ್ಷೆ ವಸಂತಮ್ಮ, ಮುಖಂಡರಾದ ನಂದೀಶ್, ರುದ್ರೇಶ್, ಬನಶಂಕರಿಬಾಬು, ಬಂಬು ಮೋಹನ್, ರಾಕೇಶ್, ವಿನಯ್ ಜೈನ್, ಪ್ರೀತಂ ಜೈನ್, ಮಲ್ಲಿಕಾರ್ಜುನಯ್ಯ, ಜಿ. ಜಗದೀಶ್, ವೆಂಕಟೇಶ್, ನಿಸರ್ಗ ರಮೇಶ್, ರವಿ ಚೆಂಗಾವಿ, ಗಂಗೇಶ್ ಹದ್ದಿನಕಲ್ಲು, ಹೆಚ್. ರಾಯಪ್ಪ, ಸಿದ್ಧಲಿಂಗಯ್ಯ, ವೆಂಕಟೇಶಾಚಾರ್ ಮೊದಲಾದವರು ಭಾಗವಹಿಸಿದ್ದರು.

# ವಿದ್ಯಾರ್ಥಿಗಳ ಬದುಕಿಗೆ ಮೌಲ್ಯಗಳೇ ನಿಜವಾದ ಮೈಲುಗಲ್ಲು ; ಜಗದೀಶ್



ತುಮಕೂರು : ವಿದ್ಯಾರ್ಥಿಗಳ ಬದುಕಿಗೆ ಮೌಲ್ಯಗಳೇ ನಿಜವಾದ ಮೈಲುಗಲ್ಲುಗಳಾಗಬೇಕು ಎಂದು ನೆರಳು ಜನಸೇವಾ ಟ್ರಸ್ಟ್ ಅಧ್ಯಕ್ಷ ಜಗದೀಶ್ ತಿಳಿಸಿದರು.

ಶಿರಾ ತಾಲೂಕಿನ ಬುಕ್ಕಪಟ್ಟಣ ಹೋಬಳಿ ಕುರುಬರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಗೆ ನೆರಳು ಜನಸೇವಾ ಟ್ರಸ್ಟ್ ವತಿಯಿಂದ ಶಾಲಾ ಮಕ್ಕಳಿಗೆ ಉಚಿತ ಬ್ಯಾಗ್ ಮತ್ತು ನೋಟ್ ಪುಸ್ತಕ ಹಾಗೂ ಲೇಖನಿ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನವು ಕೇವಲ ಅಂಕಗಳಿಕೆ ಹಾಗೂ ಉದ್ಯೋಗದ ಸಿದ್ಧತೆಯಾಗದೆ ಶಿಸ್ತು, ಸೇವೆ, ನಾಯಕತ್ವ ಮತ್ತು ಮಾನವೀಯತೆಯನ್ನು ಮೈಗೂಡಿಸಿಕೊಳ್ಳುವ ಕಾಲಘಟ್ಟವಾಗಬೇಕು. ಗುರು–ಹಿರಿಯರ ಮೇಲಿನ ಗೌರವ ಮತ್ತು ತ್ಯಾಗವನ್ನು ಸದಾ ಸ್ಮರಿಸಬೇಕು. ಸಕಾರಾತ್ಮಕ ಮನೋಭಾವವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಯು ಬದುಕಿನ ಕನಸನ್ನು ಸಾಕ್ಷಾತ್ಕಾರಗೊಳಿಸುವ ಅಮೂಲ್ಯ ಸಮಯ, ಮನಸ್ಸನ್ನು ಹಿಡಿದಿಟ್ಟುಕೊಂಡು, ಭಾವನೆಗಿಂತ ಮಿಗಿಲಾಗಿ ಶಿಸ್ತು, ಭಕ್ತಿ, ಶ್ರದ್ಧೆಗೆ ಸಮಯ ನೀಡಿದ್ದಲ್ಲಿ ಯಶಸ್ಸು ನಿಶ್ಚಿತ. ನಾವು ನಿರೀಕ್ಷಿಸಿದಂತೆ ಜೀವನದಲ್ಲಿ ಯಾವುದು ಸಂಭವಿಸಲು ಸಾಧ್ಯವಿಲ್ಲ. ಆದರೆ ಹೆತ್ತವರ ಆಶೀರ್ವಾದ, ಶಿಕ್ಷಕರ ಮಾರ್ಗದರ್ಶನ, ವಿದ್ಯಾರ್ಥಿಯ ವಯಕ್ತಿಕ ಶ್ರಮದಿಂದ ಸಹಕಾರ ಗೊಳಿಸಬಹುದು ಎಂದು ತಿಳಿಸಿದರು.

ಮುಖ್ಯ ಶಿಕ್ಷಕಿ ಎ.ಆರ್.ಅನಿತಾ ಮಾತನಾಡಿ, ನಮ್ಮ ರಾಷ್ಟ್ರಧ್ವಜವು ನಮಗೆ ಏಕತೆ, ಶಾಂತಿ ಮತ್ತು ಧೈರ್ಯದ ಸಂದೇಶವನ್ನು ನೀಡುತ್ತದೆ. ಅದರ ಗೌರವವನ್ನು ಕಾಪಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಟ್ರಸ್ಟ್ ಉಪಾಧ್ಯಕ್ಷರಾದ ಕೆಂಪರಾಜು, ಖಜಾಂಚಿ ನಾಗರಾಜು, ಸಂಘದ ಪದಾಧಿಕಾರಿಗಳಾದ ರುದ್ರೇಶ್, ಪ್ರದೀಪ್, ನವಾಜ್, ಶಾಬಾಜ್, ಸಂತೋಷ್, ಮಧು, ಚೇತನ್, ವೆಂಕಟೇಶ್, ಶಿಕ್ಷಕರಾದ ವಸಂತಕುಮಾರ್, ಶಶಿಕಲಾ, ಎಸ್‌ಡಿಎಂಸಿ ಅಧ್ಯಕ್ಷರಾದ ಉಮೇಶ್,ಭಾಗ್ಯಲಕ್ಷ್ಮಿ, ಭೂತೇಶ್, ರೂಪ, ವನಿತಾ, ಪ್ರಕಾಶ್, ದೇವರಾಜ್, ಪರಮೇಶ್ ಮತ್ತಿತರರು ಇದ್ದರು.

**ಬದುಕಿನ ಅನೇಕ ಸಮಸ್ಯೆಗಳಿಗೆ..!! ನಮ್ಮ ಮಾತಿನ ಶೈಲಿಯೇ ಕಾರಣವಾಗುತ್ತದೆ..!!**

**ನಾವು ಏನು ಹೇಳುತ್ತೇವೆ ಅನ್ನೋದಕ್ಕಿಂತ..!! ಹೇಗೆ ಹೇಳುತ್ತೇವೆ ಎನ್ನುವುದೇ ಮುಖ್ಯ.**

# ಸ್ವಾತಂತ್ರ್ಯ ದಿನಾಚರಣ ನಮ್ಮ ಪೂರ್ವಜರು ಹೋರಾಟ ಮಾಡಿ, ತ್ಯಾಗ ಬಲಿದಾನದ ಪ್ರತೀಕವಾಗಿ ಲಭಿಸಿದ ಅತ್ಯಮೂಲ್ಯ ಕೊಡುಗೆ ; ಎನ್. ಕೆ. ನಿಧಿಕುಮಾರ್



ತುಮಕೂರು : ಅಖಿಲ ಭಾರತ ದಲಿತ ಕ್ರಿಯಾ ಸಮಿತಿ ಹಾಗೂ ಅಖಿಲ ಭಾರತ ಡಾ. ಬಿ.ಆರ್. ಅಂಬೇಡ್ಕರ್ ಪ್ರಚಾರ ಸಮಿತಿಯ ವತಿಯಿಂದ ಇಂದು ತುಮಕೂರು ನಗರದ ದಿಬ್ಬೂರು ಬಡಾವಣೆಯಲ್ಲಿನ ಸರ್ಕಾರಿ ಪ್ರಾಥಮಿಕ ಪಾಠಶಾಲೆಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು, ಧ್ವಜಾರೋಹಣ ಮತ್ತು ಮಕ್ಕಳಿಗೆ ಲೇಖನ ಸಾಮಾಗ್ರಿಗಳನ್ನು ವಿತರಿಸುವುದರ ಮೂಲಕ ಸ್ವಾತಂತ್ರ್ಯ ದಿನಾಚರಣೆಯನ್ನು ವಿಶೇಷವಾಗಿ ಆಚರಿಸಲಾಯಿತು.

ಧ್ವಜಾರೋಹಣ ನೆರವೇರಿಸಿದ ನಂತರ ಮಕ್ಕಳಿಗೆ ಸ್ವಾತಂತ್ರ್ಯೋತ್ಸವ ಮಹತ್ವವನ್ನು ಅಖಿಲ ಭಾರತ ದಲಿತ ಕ್ರಿಯಾ ಸಮಿತಿ ಹಾಗೂ ಅಖಿಲ ಭಾರತ ಡಾ. ಬಿ.ಆರ್. ಅಂಬೇಡ್ಕರ್ ಪ್ರಚಾರ ಸಮಿತಿಯ ಜಿಲ್ಲಾಧ್ಯಕ್ಷರಾದ ಎನ್. ಕೆ. ನಿಧಿಕುಮಾರ್ ತಿಳಿಸುತ್ತಾ ಮಾತನಾಡಿ ನಮ್ಮ ಪೂರ್ವಜರು ಹೋರಾಟ ಮಾಡಿ, ತ್ಯಾಗ ಬಲಿದಾನದ ಪ್ರತೀಕವಾಗಿ ಲಭಿಸಿದ ಅತ್ಯಮೂಲ್ಯ ಕೊಡುಗೆ ಆಗಿದೆ. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಎಷ್ಟೋ ಜನರು ತಮ್ಮ ಜೀವನವನ್ನೇ ಸಮರ್ಪಿಸಿದಲ್ಲದೇ ಅವರುಗಳ ತ್ಯಾಗ, ಶೌರ್ಯ ಮತ್ತು ದೇಶಪ್ರೇಮವನ್ನು ಈ ಪವಿತ್ರ ದಿನದಂದು ಗೌರವದಿಂದ ಸ್ಮರಿಸುವ ಸುಯೋಗ ನಮ್ಮಗಳಿಗೆ ಬಂದೊದಗಿದೆ ಎಂದರಲ್ಲದೇ ನಮ್ಮ ದೇಶದ ಏಕತೆ, ಅಖಂಡತೆ, ಶಾಂತಿ, ಸೌಹಾರ್ದತೆ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮತ್ತಷ್ಟು ಬಲಪಡಿಸುವ ಸಂಕಲ್ಪವನ್ನು ಮಾಡೋಣ. ಜಾತಿ, ಧರ್ಮ, ಭಾಷೆ ಹಾಗೂ ಪ್ರಾಂತ್ಯಗಳ ಭೇದ-ಭಾವಗಳನ್ನು ಮೀರಿ, ಎಲ್ಲರೂ ಸಹೋದರತ್ವದ ಭಾವನೆಯೊಂದಿಗೆ ಒಗ್ಗಟ್ಟಾಗಿ ದೇಶದ ಅಭಿವೃದ್ಧಿಗೆ ಕೈಜೋಡಿಸೋಣ ಎಂದು ಕರೆ ಕೊಟ್ಟರು.

ಅಖಿಲ ಭಾರತ ದಲಿತ ಕ್ರಿಯಾ ಸಮಿತಿಯ ರಾಜ್ಯ ಉಪಾಧ್ಯಕ್ಷರಾದ ಇಂದ್ರಕುಮಾರ್ ಡಿ.ಕೆ. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ನಮ್ಮ ಭಾರತದ ಭವ್ಯ ಪರಂಪರೆ, ಸಂಸ್ಕೃತಿ ಮತ್ತು ಸಂವಿಧಾನದ ಆಶಯಗಳನ್ನು ಗೌರವಿಸುತ್ತಾ, ಬಲಿಷ್ಠ, ಸಮೃದ್ಧ, ಸಮಾನತೆ ಮತ್ತು ನ್ಯಾಯಯುತ ಭಾರತ ನಿರ್ಮಾಣಕ್ಕೆ ನಮ್ಮೆಲ್ಲರ ಕೊಡುಗೆ ನೀಡೋಣ. ದೇಶದ ಗಡಿಯಲ್ಲಿ ಹಗಲಿರುಳು ಕರ್ತವ್ಯ ನಿರ್ವಹಿಸುತ್ತಿರುವ ನಮ್ಮ ವೀರ ಯೋಧರಿಗೆ, ದೇಶದ ಪ್ರಗತಿಗೆ ಶ್ರಮಿಸುತ್ತಿರುವ ರೈತರು, ಕಾರ್ಮಿಕರು, ಶಿಕ್ಷಕರು, ವೈದ್ಯರು, ಯುವಕರು ಹಾಗೂ ಪ್ರತಿಯೊಬ್ಬ ನಾಗರಿಕರಿಗೆ ಗೌರವಪೂರ್ವಕ ನಮನಗಳನ್ನು ಈ ಮೂಲಕ ಅರ್ಪಿಸುತ್ತಿದ್ದೇವೆ, ಇಂದಿನ ಮಕ್ಕಳೇ ನಾಳೆಯ ನಮ್ಮ ಅಮೂಲ್ಯ ರತ್ನಗಳು ಎಂಬಂತೆ ಮಕ್ಕಳು ಇಂದು ವಿದ್ಯೆ ಕಲಿತರೆ, ಮುಂದಿನ ದಿನ ನಮ್ಮ ದೇಶದ ಭವಿಷ್ಯವನ್ನು ರೂಪಿಸುವ ಅಮೂಲ್ಯ ವ್ಯಕ್ತಿಗಳಾಗಿ ಬದಲಾವಣೆ ಆಗುತ್ತಾರೆ, ಬಾಬಾ ಸಾಹೇಬ್ ಅಂಬೇಡ್ಕರ್ ರವರ ಆಶಯದಂತೆ ಯಾರೊಬ್ಬರೂ ಸಹ ವಿದ್ಯೆಯಿಂದ ವಂಚಿತರಾಗಬಾರದು ಎಂಬ ನಾಣ್ಣುಡಿಯಂತೆ ಇಂದು ನಮ್ಮ ಸಂಘಟನೆಯ ವತಿಯಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲಕರವಾಗುವಂತೆ ಲೇಖನ ಸಾಮಾಗ್ರಿಗಳನ್ನು ವಿತರಣೆ ಮಾಡಿದ್ದೇವೆ, ಇದನ್ನು ಮಕ್ಕಳು ಸದುಪಯೋಗ ಪಡಿಸಿಕೊಂಡು ಉನ್ನತ ವ್ಯಾಸಂಗವನ್ನು ಪಡೆದು ಭಾರತದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದು ಕರೆ ಕೊಟ್ಟರು.

ಶಿಕ್ಷಕರು ಹಾಗೂ ಸಾವಿತ್ರಿಭಾಯಿ ಪುಲೆ ಸಂಘದ ಜಿಲ್ಲಾಧ್ಯಕ್ಷರಾದ ಅನುಸೂಯದೇವಿ ಮಾತನಾಡಿ ವೈವಿಧ್ಯತೆಯೇ ನಮ್ಮ ದೇಶದ ಬಲ, ಸಾಮರಸ್ಯವೇ ನಮ್ಮ ಜೀವಾಳ. ಯಾವುದೇ ಭೇದ-ಭಾವಗಳಿಲ್ಲದೆ ಪ್ರತಿಯೊಬ್ಬ ನಾಗರಿಕನ ಹಕ್ಕುಗಳನ್ನು ಸಂರಕ್ಷಿಸಿ, ಸರ್ವರಿಗೂ ಉತ್ತಮ ಬದುಕು ಕಲ್ಪಿಸುವುದೇ ನಮ್ಮ ಸರ್ಕಾರದ ಪ್ರಮುಖ ಧ್ಯೇಯ. ನಾವೆಲ್ಲರೂ ಸೇರಿ ಸಮೃದ್ಧವಾದ, ಜಗತ್ತೇ ತಿರುಗಿ ನೋಡುವಂತಹ ಕರ್ನಾಟಕವನ್ನು ಕಟ್ಟಲು ಈ ಶುಭದಿನದಂದು ಸಂಕಲ್ಪ ತೊಡೋಣ ಎಂದು ಮಕ್ಕಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಅಖಿಲ ಭಾರತ ದಲಿತ ಕ್ರಿಯಾ ಸಮಿತಿ ಹಾಗೂ ಅಖಿಲ ಭಾರತ ಡಾ. ಅಂಬೇಡ್ಕರ್ ಪ್ರಚಾರ ಸಮಿತಿಯ ಜಿಲ್ಲಾಧ್ಯಕ್ಷರಾದ ಎನ್. ಕೆ. ನಿಧಿಕುಮಾರ್, ರಾಜ್ಯ ಉಪಾಧ್ಯಕ್ಷರಾದ ಇಂದ್ರಕುಮಾರ್ ಡಿ.ಕೆ, ಉಪ ವಿಭಾಗಾಧಿಕಾರಿಗಳ ಜಾಗೃತಿ ಸಮಿತಿ ಸದಸ್ಯರಾದ ರಾಮಾಂಜನೇಯ, ಶಾಲೆಯ ಎಸ್. ಡಿ. ಎಂ. ಸಿ. ಅಧ್ಯಕ್ಷರಾದ ಸುಶೀಲ, ಮುಖ್ಯೋಪಾಧ್ಯಾಯರಾದ ನರಸಿಂಹಮೂರ್ತಿ, ಶಿಕ್ಷಕರುಗಳಾದ ಶಶಿಕಲ, ಮಂಜುಳ, ಜ್ಯೋತಿ, ಸ್ಥಳೀಯ ಮುಖಂಡರಾದ ಭೈರೇಶ್, ವಿಜಿಯಣ್ಣ, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ವಿಕಸಿತ ಭಾರತ ನಿರ್ಮಾಣದಲ್ಲಿ ಯುವಜನತೆಯ ಪಾತ್ರ ನಿರ್ಣಾಯಕ ; ಕ್ಯಾಪ್ಟನ್ ಟಿ.ಎನ್. ಸತ್ಯನಾರಾಯಣ




ತುಮಕೂರು: ಸ್ವಾತಂತ್ರ್ಯ ಎಂಬುದು ಕೇವಲ ಬ್ರಿಟಿಷರ ಆಡಳಿತ ದಿಂದ ಮುಕ್ತಿ ಪಡೆಯುವುದಲ್ಲ, ಬದಲಿಗೆ ಭಯ, ಅಜ್ಞಾನ ಮತ್ತು ಭ್ರಷ್ಟಾಚಾರದಿಂದ ಮುಕ್ತವಾದ ಸಮಾಜವನ್ನು ನಿರ್ಮಿಸು ವುದೇ ನಿಜವಾದ ಸ್ವಾತಂತ್ರ್ಯ. ಇಂದಿನ ನಮ್ಮ ದೇಶದ ಅಭಿವೃದ್ಧಿಯಲ್ಲಿ ಯುವಜನ ತೆಯ ಪಾತ್ರ ಅತ್ಯಂತ ನಿರ್ಣಾಯಕವಾ ಗಿದೆ" ಎಂದು ಭಾರತದ ನಿವೃತ್ತ ಸೇನಾಧಿ ಕಾರಿ ಕ್ಯಾಪ್ಟನ್ ಟಿ.ಎನ್. ಸತ್ಯನಾರಾಯಣ ಹೇಳಿದರು.

ತುಮಕೂರು ವಿಶ್ವವಿದ್ಯಾ ನಿಲಯದ ಆವರಣದಲ್ಲಿ ನಡೆದ 80ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ದೇಶವನ್ನು ಮುನ್ನಡೆಸಲು ಯುವಕರಿಗೆ ಶಿಸ್ತು ಎಂಬುದು ಅತ್ಯಂತ ಮುಖ್ಯವಾದ ಅಸ್ತ್ರವಾಗಿದೆ. ಶಿಸ್ತಿನಿಂದ ಕೂಡಿದ ಜೀವನವು ವೈಯಕ್ತಿಕ ಯಶಸ್ಸಿಗೆ ಮಾತ್ರವಲ್ಲದೆ, ಸದೃಢ ರಾಷ್ಟ್ರ ನಿರ್ಮಾಣ ಕ್ಕೂ ಬುನಾದಿಯಾಗುತ್ತದೆ ಎಂದರು. ಇಂದಿನ ದೇಶದ ಪ್ರಮುಖ ಸವಾಲುಗಳಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಕೂಡ ಒಂದಾಗಿದ್ದು, ಇದು ದೇಶದ ಅಭಿವೃದ್ಧಿಗೆ ಮತ್ತು ಯುವಕರ ಪ್ರತಿಭೆಗೆ ತಡೆಯೊಡ್ಡುವ ದೊಡ್ಡ ಪಿಡುಗಾಗಿದೆ. ಪ್ರತಿಯೊಬ್ಬ ಯುವಕನೂ ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡು, ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತುವ ಮೂಲಕ ಬದಲಾವಣೆಯ ಹರಿಕಾರರಾಗಬೇಕು ಎಂದು ಅವರು ಕರೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಯುವ ಸಮುದಾಯವು ತಮ್ಮ ಹಕ್ಕುಗಳಿಗಾಗಿ ಮತ್ತು ಭವಿಷ್ಯದ ರಕ್ಷಣೆಗಾಗಿ ಜಾಗೃತ ರಾಗುತ್ತಿರುವುದನ್ನು ಉದಾಹರಿಸಿದ ಅವರು, ದೆಹಲಿಯಲ್ಲಿ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆ ಸೋರಿಕೆ ವಿಷಯವಾಗಿ ನಡೆಸಿದ ಗಂಭೀರ ಪ್ರತಿಭಟನೆಗಳು ಯುವಕರ ಜಾಗೃತಿಯ ಪ್ರತೀಕವಾಗಿವೆ ಎಂದರು.

ಯುವಕರ ಈ ಸಾಮೂಹಿಕ ಎಚ್ಚರಿಕೆಗೆ ಸ್ಪಂದಿಸಿರುವ ಕೇಂದ್ರ ಸರ್ಕಾರವು, ತಪ್ಪು ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದರ ಜೊತೆಗೆ ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಹೊಸ ಕಠಿಣ ಮಸೂದೆಗಳನ್ನು ಜಾರಿಗೆ ತಂದಿರುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರತಿಭೆಗೆ ನ್ಯಾಯ ಒದಗಿಸುವ ದಿಶೆಯಲ್ಲಿ ಸ್ವಾಗತಾರ್ಹ ಹೆಜ್ಜೆಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತುಮಕೂರು ವಿಶ್ವ ವಿದ್ಯಾನಿಲಯದ ಪ್ರಭಾರ ಕುಲಪತಿಗಳಾದ ಪ್ರೊ. ಹೆಚ್. ನಾಗಭೂಷಣ ಅವರು ವಿಕಸಿತ ಭಾರತ ನಿರ್ಮಾಣದಲ್ಲಿ ಯುವ ಜನತೆಯ ಪಾತ್ರ ಪ್ರಮುಖವಾಗಿದೆ. ಯುವ ಜನರು ಮೊಬೈಲ್ ಅನ್ನು ಕೇವಲ ಮನರಂಜನೆಗಾಗಿ ಮಾತ್ರ ಬಳಸದಿರಿ. ಜ್ಞಾನವಿರುವುದು ವಿಶ್ವವಿದ್ಯಾನಿಲಯದ ಕಟ್ಟಡಗಳಲ್ಲಿ ಅಲ್ಲ, ಸಂಶೋಧನಾಲಯಗಳಲ್ಲಿ ಎಂಬುದನ್ನು ಅರಿತುಕೊಳ್ಳಬೇಕು ಎಂದರು.

ಪತ್ರಿಕೋದ್ಯಮ ವಿಭಾಗದ ಅಧ್ಯಕ್ಷರಾದ ಡಾ.ಸಿಬಂತಿ ಪದ್ಮನಾಭ ಅವರು ನಿರೂಪಿಸಿದರು.

# ಪ್ರಸ್ತಾಪಿತ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಳಕ್ಕೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಭೇಟಿ

ತುಮಕೂರು ಜಿಲ್ಲೆಯಲ್ಲಿ ಸುಮಾರು 26 ವರ್ಷಗಳಿಂದ ವಿವಿಧ ಹಂತದ ಮೇಲ್ಮನವಿ ಹಾಗೂ ನ್ಯಾಯಾಂಗ ಪ್ರಕ್ರಿಯೆಯಲ್ಲಿದ್ದ 106 ಎಕರೆ 23 ಗುಂಟೆ ಅಮೂಲ್ಯ ಸಾರ್ವಜನಿಕ ಆಸ್ತಿಯನ್ನು ಜಿಲ್ಲಾಡಳಿತ ದಾಖಲೆಗಳ ಪರಿಶೀಲನೆಯ ಮೂಲಕ ರಕ್ಷಿಸಿದೆ. ತುಮಕೂರು ನಗರದಿಂದ ಸುಮಾರು 7 ಕಿ.ಮೀ. ದೂರದಲ್ಲಿರುವ ಗೂಳೂರು ಹೋಬಳಿಯ ಕೊಂಡಾಪುರ ಹಾಗೂ ಕಲ್ಲುಮಠ ಗ್ರಾಮಗಳ ಸರ್ವೆ ನಂ. 3, 13, 17 ಮತ್ತು 20 ಗೇಣಿ ಅರ್ಜಿಗಳು ಸಲ್ಲಿಕೆಯಾಗಿದ್ದವು.

ದಾಖಲೆಗಳ ಪರಿಶೀಲನೆಯಲ್ಲಿ ಸದರಿ ಜಮೀನುಗಳು 'ದೇವದಾಯ ಇನಾಂತಿ' ಜಮೀನುಗಳಾಗಿದ್ದು, ಗೂಳೂರು ಛತ್ರ/ಮುಜಾಫರ್ ಖಾನ ನಿರ್ವಹಣೆಯ ಉದ್ದೇಶಕ್ಕಾಗಿ ಮೀಸಲಾದ ಸಾರ್ವಜನಿಕ ಆಸ್ತಿ ಎಂಬುದು ಬೆಳಕಿಗೆ ಬಂದಿತ್ತು. ಪ್ರಕರಣವು ಹಲವು ವರ್ಷಗಳ ಕಾಲ ಮೇಲ್ಮನವಿ ಹಾಗೂ ನ್ಯಾಯಾಂಗ ಪ್ರಕ್ರಿಯೆಯಲ್ಲಿ ಮುಂದುವರಿದಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯವು 02-06-1999ರಂದು ಪ್ರಕರಣವನ್ನು ಜಿಲ್ಲಾಧಿಕಾರಿಗಳ ಮರುಪರಿಶೀಲನೆಗೆ ವರ್ಗಾಯಿಸಿತ್ತು.

ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಜಿಲ್ಲಾಡಳಿತವು ಈ ಪ್ರಕರಣದಲ್ಲಿ ಸಮಗ್ರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ವಾರಸುದಾರರು, ತಮ್ಮ ಪೂರ್ವಜರು ಸದರಿ ಜಮೀನಿನಲ್ಲಿ ಉಳುಮೆ ಮಾಡಿರಲಿಲ್ಲ, ಲಭ್ಯವಿದ್ದ ಕಂದಾಯ ದಾಖಲೆಗಳು ಮತ್ತು ಕ್ವಿಟ್ ರೆಂಟ್ ವಹಿಗಳನ್ನು ಪರಿಶೀಲಿಸಿದ ನಂತರ, ದಿ:24-04-2026ರಂದು ಜಿಲ್ಲಾಡಳಿತವು ಗೇಣಿ ಅರ್ಜಿಗಳನ್ನು ವಜಾಗೊಳಿಸಿ, ಜಮೀನುಗಳನ್ನು ಸಾರ್ವಜನಿಕ ಆಸ್ತಿಯಾಗಿ ಉಳಿಸುವ ಮಹತ್ವದ ಆದೇಶ ಹೊರಡಿಸಿತು.

ಜಿಲ್ಲಾಡಳಿತದ ಆದೇಶದಂತೆ ಪಹಣಿ ಸೇರಿದಂತೆ ಸಂಬಂಧಿತ ಕಂದಾಯ ದಾಖಲೆಗಳಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಲಾಗಿದೆ. ಇದರ ಮೂಲಕ 106 ಎಕರೆ 23 ಗುಂಟೆ ಮೌಲ್ಯಯುತ ಸಾರ್ವಜನಿಕ ಆಸ್ತಿ ಖಾಸಗಿ ವ್ಯಕ್ತಿಗಳ ಪಾಲಾಗುವುದನ್ನು ತಡೆಯಲಾಗಿದೆ.



ಸಾರ್ವಜನಿಕ ಆಸ್ತಿ ಸಾರ್ವಜನಿಕರ ಸ್ವತ್ತಾಗಿಯೇ ಉಳಿಯಬೇಕು ಎಂಬ ನಿಟ್ಟಿನಲ್ಲಿ ಕೈಗೊಂಡಿರುವ ಈ ಕ್ರಮ ಅತ್ಯಂತ ಮಹತ್ವದ್ದಾಗಿದೆ. ಸುಮಾರು ಮೂರು ದಶಕಗಳಿಂದ ಬಾಕಿಯಿದ್ದ ಪ್ರಕರಣವನ್ನು ದಾಖಲೆಗಳ ಆಧಾರದ ಮೇಲೆ ಸತ್ಯಾಸತ್ಯತೆ ಪರಿಶೀಲಿಸಿ ಸಾರ್ವಜನಿಕ ಆಸ್ತಿಯನ್ನು ರಕ್ಷಿಸಿರುವುದು ದಿಟ್ಟ ಹೆಜ್ಜೆಯಾಗಿದೆ.

ಇದರ ನಡುವೆ, ಸನ್ಮಾನ್ಯ ಉಪ-ಮುಖ್ಯಮಂತ್ರಿಗಳು, ಕಂದಾಯ ಸಚಿವರು ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಜಿ.ಪರಮೇಶ್ವರ ಅವರು ಸ್ವಾತಂತ್ರ್ಯ ದಿನಾಚರಣೆಯ ಸಂದೇಶದಲ್ಲಿ ಇದೇ ಸ್ಥಳದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಕುರಿತು ಪ್ರಸ್ತಾಪಿಸಿದರು. ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು ಸನ್ಮಾನ್ಯ ಉಪ-ಮುಖ್ಯಮಂತ್ರಿಗಳು, ಕಂದಾಯ ಸಚಿವರು ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಜಿ.ಪರಮೇಶ್ವರ ಅವರು ಈ ಸ್ಥಳದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಕುರಿತು ಪ್ರಸ್ತಾಪಿಸಿದರು ಅತ್ಯಂತ ಸಂತೋಷದ ಸಂಗತಿಯಾಗಿದೆ. 106 ಎಕರೆ ವಿಸ್ತೀರ್ಣದ ಈ ಸಾರ್ವಜನಿಕ ಜಮೀನು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಬಳಸುವ ಸಾಧ್ಯತೆ ಮೂಡಿರುವುದು ಹರ್ಷದಾಯಕವಾಗಿದೆ ಎಂದು ತಿಳಿಸಿದರು.

ಸದರಿ ಜಾಗಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು

# ಮನೆ ಮನೆಗೆ ಜಾತಿ ಪ್ರಮಾಣ ಪತ್ರ ವಿತರಣೆ ಅಭಿಯಾನಕ್ಕೆ ವೇಗ ; ಜಿಲ್ಲಾಧಿಕಾರಿ ಸೂಚನೆ

ತುಮಕೂರು : ಜಾತಿ ಪ್ರಮಾಣ ಪತ್ರಗಳನ್ನು ಮನೆ ಮನೆಗೆ ವಿತರಿಸುವ ಅಭಿಯಾನದ ಕುರಿತು ಸಭೆ ಇಂದು ನಡೆಸಲಾಯಿತು. ಅಭಿಯಾನದ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿಲ್ಲದ ಹಿನ್ನೆಲೆಯಲ್ಲಿ, ಪ್ರಗತಿಯನ್ನು ಮತ್ತಷ್ಟು ಸುಧಾರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಅರ್ಹ ಫಲಾನುಭವಿಗಳನ್ನು ಸಮರ್ಪಕವಾಗಿ ಗುರುತಿಸಿ, ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಜಾತಿ ಪ್ರಮಾಣ ಪತ್ರಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು. ಅರ್ಹರಿಗೆ ಸಕಾಲದಲ್ಲಿ ಪ್ರಮಾಣ ಪತ್ರ ದೊರೆಯುವಂತೆ



ಅಧಿಕಾರಿಗಳು ವಿಶೇಷ ಗಮನ ಹರಿಸುವಂತೆ ತಿಳಿಸಲಾಯಿತು.

ಅಭಿಯಾನದ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸುವುದರ ಜೊತೆಗೆ, ತಾಲೂಕುವಾರು ಗುರಿಯನ್ನು ನಿಗದಿತ ಅವಧಿಯಲ್ಲಿ ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಕ್ಷೇತ್ರಮಟ್ಟದ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಅಭಿಯಾನಕ್ಕೆ ವೇಗ ನೀಡುವಂತೆ ತಿಳಿಸಲಾಯಿತು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರರು ಉಪಸ್ಥಿತರಿದ್ದರು.

**ನೀವು ಯಾವಾಗ ಹಿಂತಿರುಗಿ ನೋಡುವುದರಲ್ಲಿ ಆಸಕ್ತಿ ಕಳೆದುಕೊಂಡು,**
**ಮುಂದೆ ಹೆಜ್ಜೆಯಿಡಲು ಉತ್ಸುಕರಾಗಿರುತ್ತೀರೋ,**
**ಆಗ ನೀವು ಬದುಕಿನ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದೀರಿ ಎಂದರ್ಥ**

# ಬಸ್ ಅಡ್ಡಗಟ್ಟಿ ಎಬಿವಿಪಿ ನೇತೃತ್ವದಲ್ಲಿ ವಿದ್ಯಾರ್ಥಿಗಳಿಂದ ಪ್ರತಿಭಟನೆ



ತುಮಕೂರಿನಲ್ಲಿ ಸಮರ್ಪಕ ಬಸ್ ವ್ಯವಸ್ಥೆ ಕಲ್ಪಿಸುವಂತೆ ಆಗ್ರಹಿಸಿ ವಿದ್ಯಾರ್ಥಿಗಳು ಎಬಿವಿಪಿ ನೇತೃತ್ವದಲ್ಲಿ ತುಮಕೂರು ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿದರು. ಕೊರಟಗೆರೆ, ಪಾವಗಡ, ಮಧುಗಿರಿ ಹಾಗೂ ಚಿಕ್ಕನಾಯಕನಹಳ್ಳಿ ಭಾಗಗಳಿಗೆ ಅಗತ್ಯಕ್ಕೆ ತಕ್ಕಂತೆ ಬಸ್‌ಗಳನ್ನು ಹೆಚ್ಚಿಸುವಂತೆ ವಿದ್ಯಾರ್ಥಿಗಳು ಒತ್ತಾಯಿಸಿದರು.

ಪ್ರತಿಭಟನೆ ವೇಳೆ ವಿದ್ಯಾರ್ಥಿಗಳು ಕೆಎಸ್ಆರ್‌ಟಿಸಿ ಬಸ್‌ಗಳನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದರು. ಬಸ್ ತಡೆದಿದ್ದಕ್ಕೆ ಪೊಲೀಸರು ಹಾಗೂ ವಿದ್ಯಾರ್ಥಿಗಳ ನಡುವೆ ವಾಗ್ವಾದ ನಡೆಯಿತು. ಉಚಿತ ಬಸ್ ಪಾಸ್ ನೀಡಲಾಗಿದೆ, ಆದರೆ ವಿದ್ಯಾರ್ಥಿಗಳು ಕಾಲೇಜುಗಳಿಗೆ ತೆರಳಲು ಸಮರ್ಪಕ ಬಸ್ ವ್ಯವಸ್ಥೆಯೇ ಇಲ್ಲ ಎಂದು ವಿದ್ಯಾರ್ಥಿಗಳು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು.

ಎಬಿವಿಪಿ ತುಮಕೂರು ವಿಭಾಗ ಸಂಚಾಲಕ ಹೆಚ್.ಆರ್. ಗುರುಪ್ರಸಾದ್ ಮಾತನಾಡಿ, ಸಮರ್ಪಕ ಬಸ್ ವ್ಯವಸ್ಥೆ ಕಲ್ಪಿಸುವಂತೆ ಹಲವು ಬಾರಿ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಉಚಿತ ಬಸ್ ಪಾಸ್ ನೀಡಿದರೂ ಬಸ್‌ಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಪ್ರತಿಭಟನಾನಿರತ ವಿದ್ಯಾರ್ಥಿಗಳ ಮೇಲೆ ಪೊಲೀಸರು ದೌರ್ಜನ್ಯ ನಡೆಸಿರುವುದನ್ನು ಖಂಡಿಸುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು..

ವಿದ್ಯಾರ್ಥಿಗಳ ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ ಸ್ಥಳಕ್ಕೆ ಕೆಎಸ್ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಆಗಮಿಸಿ ವಿದ್ಯಾರ್ಥಿಗಳ ಮನವಿ ಸ್ವೀಕರಿಸಿದರು. ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸುವ ಭರವಸೆ ನೀಡಿದ ಬಳಿಕ ಪ್ರತಿಭಟನೆಯನ್ನು ಕೈ ಬಿಡಲಾಯಿತು ಪ್ರತಿಭಟನೆಯಲ್ಲಿ ನೂರಾರು ವಿದ್ಯಾರ್ಥಿಗಳು ಭಾಗಿಯಾಗಿದ್ದರು

# ವಿಕಲಚೇತನ ವ್ಯಾಪಾರಿಗಳ ಸ್ಥಳಾಂತರ ಬೇಡ: ಪಾಲಿಕೆಗೆ ಮನವಿ



ತುಮಕೂರು: ನಗರದಲ್ಲಿ ಫುಟ್‌ಪಾತ್ ತೆರವು ಕಾರ್ಯಾಚರಣೆಯಿಂದ ವ್ಯಾಪಾರ ಮಾಡಿಕೊಂಡು ಬದುಕು ಕಟ್ಟಿಕೊಂಡಿದ್ದ ವಿಕಲಚೇತನರು ಬೀದಿಪಾಲಾಗಿದ್ದಾರೆ. ನಗರಪಾಲಿಕೆ, ಜಿಲ್ಲಾಡಳಿತವು ಇವರ ವ್ಯಾಪಾರಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಡಬೇಕು ಎಂದು ಪ್ರೇರಣಾ ಅಂಗವಿಕಲರ ಕ್ಷೇಮಾಭಿವೃದ್ಧಿ ಟ್ರಸ್ಟ್ ನಗರಪಾಲಿಕೆ ಆಯುಕ್ತರಿಗೆ ಮನವಿ ಮಾಡಿದೆ.

ಈ ಸಂಬಂಧ ಟ್ರಸ್ಟ್‌ನ ಕಾರ್ಯದರ್ಶಿ ಎಸ್. ಬಾಬು ಹಾಗೂ ಪದಾಧಿಕಾರಿಗಳು ಹಾಗೂ ವ್ಯಾಪಾರ ಕಳೆದುಕೊಂಡು ಸಂತ್ರಸ್ತ ವಿಕಲಚೇತನರು ನಗರಪಾಲಿಕೆ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿ, ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುತ್ತಿರುವ ವಿಕಲಚೇತನರಿಗೆ ಅದೇ ಸ್ಥಳದಲ್ಲಿ ಅವಕಾಶ ಮಾಡಿಕೊಡುವಂತೆ ಕೋರಿದರು. ಇವರಿಗೆ ಪರ್ಯಾಯ ಜಾಗದ ವ್ಯವಸ್ಥೆ ಮಾಡುವವರೆಗಾದರೂ ಯಥಾಸ್ಥಿತಿ ಕಾಪಾಡುವಂತೆ ಮನವಿ ಮಾಡಿದರು.

ನಗರದಲ್ಲಿ ಸುಗಮ ಸಂಚಾರ, ಸಾರ್ವಜನಿಕರಿಗೆ ಸುರಕ್ಷಿತ ಫುಟ್‌ಪಾತ್ ಹಾಗೂ ಸುಂದರ ನಗರ ನಿರ್ಮಾಣದ ಉದ್ದೇಶವನ್ನು ನಮ್ಮ ಸಂಸ್ಥೆಯೂ ಬೆಂಬಲಿಸುತ್ತದೆ. ಆದರೆ, ಈ ತೆರವು ಕಾರ್ಯಾಚರಣೆಯಿಂದ ಅಂಗವೈಕಲ್ಯ ಹೊಂದಿರುವ ಹಲವು ವ್ಯಕ್ತಿಗಳು ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿರುವ ಸ್ಥಳಗಳಿಂದ ಸ್ಥಳಾಂತರಗೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಇದರಿಂದ ಅವರು ಗಂಭೀರವಾದ ಜೀವನೋಪಾಯದ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ ಎಂದು ಕಾರ್ಯದರ್ಶಿ ಎಸ್. ಬಾಬು ಹೇಳಿದರು.

ವಿಶೇಷವಾಗಿ ಶೇಕಡಾವಾರು ಹೆಚ್ಚಿನ ಅಂಗವೈಕಲ್ಯ ಹೊಂದಿರುವವರು, ಚಲನಶೀಲತೆಗೆ ತೊಂದರೆ ಇರುವವರು ಹಾಗೂ ಸ್ವಯಂ ಉದ್ಯೋಗದ ಮೂಲಕ ಜೀವನ ನಡೆಸುತ್ತಿರುವ ಅಂಗವಿಕಲರಿಗೆ ಸ್ಥಳಾಂತರವು ಸಾಮಾನ್ಯ ವ್ಯಕ್ತಿಗಳಿಗಿಂತ ಹೆಚ್ಚಿನ ಪರಿಣಾಮ ಬೀರುತ್ತದೆ. ಅವರು ಪ್ರಸ್ತುತ ಇರುವ ಸ್ಥಳದಲ್ಲಿ ತಮ್ಮ ಗ್ರಾಹಕರನ್ನು ಹೊಂದಿದ್ದು, ಅಲ್ಲಿಂದ ಏಕಾಏಕಿ ತೆರವುಗೊಳಿಸಿದರೆ ಅವರ ಆದಾಯ, ಸ್ವಾವಲಂಬನೆ ಮತ್ತು ಕುಟುಂಬದ ಜೀವನೋಪಾಯಕ್ಕೆ ನೇರ ಹೊಡೆತ ಬೀಳುತ್ತದೆ ಎಂದು ಹೇಳಿದರು.

# ಮಕ್ಕಳ ಪ್ರತಿಭೆಗೆ ಬಣ್ಣ ತುಂಬಿದ ಚಿಣ್ಣರ ಚಿತ್ರಕಲೋತ್ಸವ



ಮಕ್ಕಳಲ್ಲಿ ಅಡಗಿರುವ ಸೃಜನಶೀಲತೆ ಮತ್ತು ಕಲಾತ್ಮಕ ಪ್ರತಿಭೆಯನ್ನು ಗುರುತಿಸಿ, ಅದಕ್ಕೆ ಸೂಕ್ತ ವೇದಿಕೆ ಕಲ್ಪಿಸುವ ಉದ್ದೇಶದಿಂದ ಹಾಲೇನಹಳ್ಳಿಯ ವಾತ್ಸಲ್ಯ ಯುವಜನ ಸಂಘದ ಯುವಜನರು ಮಕ್ಕಳಿಗಾಗಿ ವಿಶೇಷವಾಗಿ "ಚಿಣ್ಣರ ಚಿತ್ರಕಲೋತ್ಸವ" ಕಾರ್ಯಕ್ರಮವನ್ನು ಆಯೋಜಿಸಿದರು.

ಚಿತ್ರಕಲೆ ಸ್ಪರ್ಧೆಯು ಕೇವಲ ಸ್ಪರ್ಧೆಯಾಗಿ ಉಳಿಯದೆ, ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಸೃಜನಶೀಲ ಚಿಂತನೆಗೆ ಪ್ರೋತ್ಸಾಹ ನೀಡುವ ವೇದಿಕೆಯಾಗಿ ರೂಪುಗೊಂಡಿತು. ಪ್ರತಿಯೊಂದು ಮಗುವಿನಲ್ಲೂ ವಿಭಿನ್ನವಾದ ಸಾಮರ್ಥ್ಯ ಮತ್ತು ಪ್ರತಿಭೆ ಅಡಗಿದ್ದು, ಅದನ್ನು ಗುರುತಿಸಿ ಪೋಷಿಸುವ ಜವಾಬ್ದಾರಿ ಸಮಾಜದಲ್ಲಿರುವ ಪ್ರತಿಯೊಬ್ಬರಿಗೂ ಇದೆ ಎಂಬ ಸಂದೇಶವನ್ನು ಕಾರ್ಯಕ್ರಮ ಸಾರಿತು.

ವಾತ್ಸಲ್ಯ ಯುವಜನ ಸಂಘದ ಯುವಜನರು ಮಕ್ಕಳೊಂದಿಗೆ ಬೆರೆತು ಅವರಿಗೆ ಅಗತ್ಯವಾದ ಪ್ರೋತ್ಸಾಹ ಮತ್ತು ಸಹಕಾರ ನೀಡುವ ಮೂಲಕ "ಯುವಜನರು ತಮ್ಮ ಅಭಿವೃದ್ಧಿಯ ಜೊತೆಗೆ ತಮ್ಮ ಸಮುದಾಯದ ಮಕ್ಕಳ ಬೆಳವಣಿಗೆಯಲ್ಲಿಯೂ ಪ್ರಮುಖ ಪಾತ್ರ ವಹಿಸಬಹುದು" ಎಂಬುದನ್ನು ಕಾರ್ಯರೂಪದಲ್ಲಿ ತೋರಿಸಿದರು.

ಈ ಕಾರ್ಯಕ್ರಮವು ಮಕ್ಕಳಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ನೀಡುವುದರ ಜೊತೆಗೆ, ಯುವಜನರಲ್ಲಿ ಸಾಮಾಜಿಕ ಜವಾಬ್ದಾರಿ, ನಾಯಕತ್ವ ಮತ್ತು ಸಮುದಾಯದೊಂದಿಗೆ ಕೆಲಸ ಮಾಡುವ ಮನೋಭಾವವನ್ನು ಬೆಳೆಸುವಂತಹ ಅನುಭವವನ್ನೂ ನೀಡಿತು.

ಈ ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳಾದ ಸಿಂಧು, ಮೋನಿಕಾ, ಆಕಾಶ್, ತೇಜಸ್, ಜೀವನ್, ನವ್ಯದಿಶ ಸಂಸ್ಥೆಯ ಅಶ್ವಿನಿ ಮತ್ತು ಮಕ್ಕಳು ಹಾಜರಿದ್ದರು.

# ವಿಷ್ಣುಚಿತ್ತರ ಆರಾಧನೆಗೆ ಗೋದಾದೇವಿಯ ವರ್ಧಂತಿ

ತಿರುವಾಡಿಪುರಂ ಎನ್ನುವುದು ಶ್ರೀರಾಮಾನುಜಾಚಾರ್ಯರ ಅನುಯಾಯಿಗಳಾದ ಶ್ರೀವೈಷ್ಣವ ಬಂಧುಗಳಿಗೆ ವಿಶೇಷವಾದ ದಿವಸ.ಶ್ರೀ ವೈಷ್ಣವ ಪರಂಪರೆಯ 12 ಜನ ಆಳ್ವಾರ್ ಗಳಲ್ಲಿ ಒಬ್ಬರಾದ ಶ್ರೀಗೋದಾದೇವಿಯ ಜನ್ಮವರ್ಧಂತಿ, ಆಳ್ವಾರ್ ಜಯಂತಿ ಅಥವಾ ತಮಿಳಿನಲ್ಲಿ ತಿರುವಾಡಿಪೂರಂ ಎಂಬುದು.

ಸುಮಾರು 6ನೇ ಶತಮಾನದಲ್ಲಿ ವಿಷ್ಣುಚಿತ್ತರೆಂಬ ಬ್ರಾಹ್ಮಣೋತ್ತಮರು ಶ್ರೀವಿಲ್ಲಿಪುತ್ತೂರು ಎಂಬ ತಮಿಳುನಾಡಿನ ಒಂದು ಗ್ರಾಮದಲ್ಲಿ ವಾಸಿಸುತ್ತಿದ್ದರು. ಇವರು ಮಹಾನ್ ದೈವಭಕ್ತರು ಶ್ರೀರಂಗನ ಪರಮ ಭಕ್ತರು ಶ್ರೀರಂಗನ ಪರಮ ಆರಾಧಕರು, ಇವರದ್ದೇ ಆದ ಒಂದು ತುಲಸೀವನ ಪ್ರತಿನಿತ್ಯ ಶ್ರೀರಂಗನಿಗೆ ತಮ್ಮ ಕೈಯ್ಯಾರೆ ಕಟ್ಟಿದ ತುಳಸೀಮಾಲೆಯನ್ನು ಅರ್ಪಿಸಿ ಅರ್ಚಿಸಿ ಆನಂದಪಡುವುದು ಕೈಂಕರ್ಯ ಅಂದರೆ ಭಗವದ್ ಸೇವೆಯಲ್ಲಿ ಆನಂದ.

ವಿಷ್ಣುಚಿತ್ತ ಆರಾಧನೆಗೆ ಸಂತೃಪ್ತನಾದ ಪರಮಾತ್ಮನು ತುಲಸೀವನದಲ್ಲಿ ಒಂದು ಸುಂದರ ಹೆಣ್ಣು ಮಗುವನ್ನು ಕರುಣಿಸಿದ ಪರಮಾನಂದ ಭರಿತರಾದ ವಿಷ್ಣುಚಿತ್ತರು ಗೋದಾ ಎಂಬ ನಾಮಧೇಯವನ್ನು ಮಗುವಿಗೆ ಹೆಸರಿಟ್ಟರು, ಅಯೋನಿಜೆಯಾದ ಶ್ರೀ ಗೋದಾದೇವಿಯು ಅವತರಿಸಿದ ಈ ದಿನವೇ ತಿರುವಾಡಿಪ್ಪೂರಂ.

ಕಾಲಕ್ರಮೇಣ ವಿಷ್ಣುಚಿತ್ತ ಪ್ರೀತಿಯ ಲಾಲನೆ ಪಾಲನೆಗಳಲ್ಲಿ ಮಗುವು ಬೆಳೆಯುತ್ತಾ ಮಗುವಿಗೆ ಬೇಕಾದ ಸಂಸ್ಕಾರಗಳನ್ನು ಕಲಿಸುತ್ತಾ ಸಾಗಿದವು, ಕಾಲಕ್ರಮದಲ್ಲಿ ಶ್ರೀವಿಷ್ಣುಚಿತ್ತರು ತಮಗೆ ತುಂಬಾಪ್ರಿಯವಾದ ಪುಷ್ಪಕೈಂಕರ್ಯದ ಸೇವೆಯನ್ನು ತಮ್ಮ ಪ್ರೀತಿಯ ಮಗಳಿಗೆ ವಹಿಸಿದರು. ಗೋದೆಯು ಪ್ರೀತಿಯಿಂದ ಕಟ್ಟಿದ ತುಲಸೀಮಾಲೆಯನ್ನು ಶ್ರೀರಂಗನಿಗೆ ಅರ್ಪಿಸಿ ಆನಂದಪಡುತ್ತಿದ್ದರು.

ಹೀಗಿರುವಾಗ ಒಂದು ದಿನ ತುಲಸೀಮಾಲೆಯಲ್ಲಿ ಅದು ಹೇಗೋ ಒಂದು ಕೂದಲು ಸೇರಿದುದನ್ನು ಕಂಡ ವಿಷ್ಣುಚಿತ್ತರು ಪರಮ ಅಪಚಾರವಾಯಿತಲ್ಲಾ ಎಂದು ದುಃಖಪಟ್ಟರು. ಮರುದಿನ ಅದೇ ಚಿಂತೆಯಲ್ಲಿ ಇರುವಾಗ ಗೋದೆಯು ತಾನು ಕಟ್ಟಿದ ಮಾಲೆಯನ್ನು ತಾನೇ ಧಾರಣೆ ಮಾಡಿಕೊಂಡು ತನ್ನ ಪ್ರತಿಬಿಂಬವನ್ನು ನೋಡಿಕೊಂಡು ಆನಂದದಿಂದ



ತನ್ನ ತಂದೆಯವರ ಕೈಗೆ ತಂದುಕೊಟ್ಟಳು, ಇದನ್ನು ಗೌಪ್ಯವಾಗಿ ಗಮನಿಸಿದ್ದ ವಿಷ್ಣುಚಿತ್ತರು ಒಲ್ಲದ ಮನಸ್ಸಿನಿಂದ ದೇವಾಲಯಕ್ಕೆ ತೆರಳಿ ಆ ತುಲಸೀಮಾಲೆಯನ್ನು ಪಕ್ಕದಲ್ಲಿಟ್ಟು ಬೇರೆ ಮಾಲೆಯನ್ನು ಸ್ವಾಮಿಗೆ ಅರ್ಪಿಸಿದರು.

ಅಂದು ರಾತ್ರಿ ಇದೇ ವಿಷಯವಾಗಿ ಚಿಂತಾಕ್ರಾಂತರಾಗಿ ನಿದ್ರೆಗೆ ಜಾರಿದಾಗ ಅವರಿಗೆ ಕನಸ್ಸಿನಲ್ಲಿ ಸಾಕ್ಷಾತ್ ಸ್ವಾಮಿಯು ಪ್ರತ್ಯಕ್ಷನಾಗಿ, ವಿಷ್ಣುಚಿತ್ತರೇ ದುಃಖಪಡಬೇಡಿ ನಿಮ್ಮ ಮುಗ್ಧಮಗು ಭಕ್ತಿಪರವಶದಿಂದ ಆ ತುಲಸೀಮಾಲೆಯನ್ನು ಕಟ್ಟಿ ತಾನು ಮುಡಿದು ಅದು ನನಗೆ ಧಾರಣೆ ಮಾಡಿಸಿದಾಗ ಹೇಗೆ ಕಾಣುತ್ತದೆ ಎಂಬ ಕುತೂಹಲದೊಂದಿಗೆ ಧರಿಸಿದಳೇ ವಿನಃ ಇಲ್ಲಿ ಯಾವುದೇ ಅಪಚಾರವಾಗಿಲ್ಲ, ಇನ್ನು ಮುಂದೆ ನೀವು ಗೋದೆಯು ತಾನು ಧರಿಸಿ ಕೊಟ್ಟ ಮಾಲೆಯನ್ನೇ ನನಗೆ ಅರ್ಪಿಸಿ ಎಂದು ಆಜ್ಞಾಪಿಸಿದರು.

ಇಂತಹ ಪರಮಭಕ್ತೆ ಸೋಚ್ಛಿಷ್ಟಾಯಾಂ ಭುಂಕ್ತೇ ತಸ್ಯೈ ಷ್ಟಾಯಾಂ ಸ್ವಜನಿಗಳಿತಂ ಯಾ ಬಲಾತ್ಕೃತ್ಯ ಬುಂಕ್ತೇ ಗೋದಾ ತಸ್ಯೈ ನಮ ಇದಮಿದಮಿದಂಭೂಯ ಏವಾಸ್ತು ಭೂಯಃ ಅಂದರೆ ತಾನು ಮೊದಲು ಧರಿಸಿ ತೆಗೆದ ಹೂವಿನ ಮಾಲೆಯಲ್ಲಿ ಶ್ರೀರಂಗನನ್ನು ಭಕ್ತಿಯಿಂದ ಕಟ್ಟಿಹಾಕಿ ತಾನು ವಶಪಡಿಸಿಕೊಂಡ ಆ ಗೋದಾದೇವಿಗೆ ಪುನಃ ಪುನಃ ನಮಸ್ಕಾರ.

ಗೋದಾ: ತುಲಸಿಯ ವನದಲ್ಲಿ ಪರಮಾತ್ಮನಿಂದ ಭೂದೇವಿಯ ಅಂಶದಿಂದ ಬಂದವಳು, ಆಚಿಡಾಳ್: ಭಗವಂತನನ್ನು ಭಕ್ತಿಯಿಂದ ವಶಪಡಿಸಿಕೊಂಡವಳು ಗೋದೆ ಕರುಣಿಸಿರುವ 30ಶ್ಲೋಕಗಳ ಮಾರ್ಗಶೀರ್ಷ ಮಾಸದಲ್ಲಿ ತಾನೇ ಸ್ವತಃ ತನ್ನ ಕೈಯಲ್ಲಿರುವ ತನ್ನ ವಯಸ್ಸಿನ ಹೆಂಗಳೆಯರೊಡಗೂಡಿ ಆಚರಿಸಿದ ವ್ರತವನ್ನು ಇಂದಿಗೂ ಸಾಂಪ್ರದಾಯಿಕ ಶ್ರೀವೈಷ್ಣವ ಪರಂಪರೆಯು ಮುಂದುವರೆಸಿಕೊಂಡು ಬರುತ್ತಿದೆ.

ಈ 30 ಪಾಶುರಗಳ ಮಾಲೆಯನ್ನು ತುರುಪ್ಪಾವೈ ಎಂದು ಕರೆಯುತ್ತಾರೆ. ಇದಲ್ಲದೆ ನಾಚ್ಚಿಯಾರ್ ತಿರುಮೊಳಿ ಮುಂತಾದ ದಿವ್ಯ ಪ್ರಬಂಧಗಳನ್ನು ಕರುಣಿಸಿರುವ ಆಂಡಾಳ್ ತಾಯಿಯ ಶಾತ್ತುಮುರೈಯಿಲ್ಲದೆ ಹಾಗೂ ಶ್ರೀ ವಿಷ್ಣುಚಿತ್ತರು ಕರುಣಿಸಿರುವ ತಿರುಪಲ್ಲಾಂಡುಗಳನ್ನು ಪಠಿಸದೇ ಎಲ್ಲಾ ಶ್ರೀವೈಷ್ಣವ ದೇವಸ್ಥಾನಗಳಲ್ಲಿನ ಪೂಜೆ ಅಪೂರ್ಣ ಹಾಗಾಗಿ ಈ ತಿರುನಕ್ಷತ್ರವು ಪವಿತ್ರಮಯವಾದ ದಿನ ತನ್ನ ಭಕ್ತಿಯ ಪರಾಕಾಷ್ಠೆತೆಯಿಂದ ಶ್ರೀರಂಗನ್ನೇ ತನ್ನ ಪತಿಯನ್ನಾಗಿ ಪಡೆದು ಶ್ರೀರಂಗನಾಯಕಿಯಾದಗೋದಾದೇವಿಯ ವರ್ಧಂತಿಯ ಶುಭಾಶಯಗಳು.

ಲೇಖನ:
ಭಕ್ತವತ್ಸಲ.ಡಿ.ಎಸ್.
ತುಮಕೂರು.

ಶ್ರೀ ಸ್ಟೋರ್ಸ್
SRI STORES
Stationery, Provision Items, Tailoring Materials,
Kuchu Materials, Cosmetics, Fancy Items, Puja Items, Etc.,
ಗ್ರಾಮ ಪಂಚಾಯಿತಿ ಕಾರ್ಯಾಲಯ ಹತ್ತಿರ, ಊರುಕೆರೆ, ತುಮಕೂರು.

ಮಣಿಕಂಠ ಪಿ
ಮೊ. 9844491669
ಶ್ರೀ ಹಿರಣ್ಮಯಿ ಜ್ಯುವೆಲರಿ ವರ್ಕ್ಸ್
SRI HIRANMAYI
JEWELLERY WORKS
ನಂ. 79/4, 3ನೇ ಮಹಡಿ, ಶಾರದ ಮಾರ್ಕೆಟ್,
ಸಿ.ಟಿ. ಸ್ಟ್ರೀಟ್, ಬೆಂಗಳೂರು.

VIDYA RANJAKA KANNADA WEEKLY NEWS PAPER, EDITOR, PUBLISHER : E.S.VENKATESHA BABU
SRI VIDYALAKSHMI ENTERPRISES, G4, VEERASOUDHA BUILDING, J.C.ROAD, TUMAKURU-572 101,
KARNATAKA. MOBILE NO. : 9886961203, E-MAIL : VIDYARANJAKA@GMAIL.COM
PRINTED AT : BASAVARAJU, SANJEETHA OFFSET PRINTERS, 2ND CROSS, CHRISTIAN STREET, P.R.NAGAR, TUMAKURU-572 101.